# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **480** |
| ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಪ್ರಾರಂಭವಾದಾಗಿನಿಂದ ಕರ್ನಾಟಕದ ಐದು ಎಸ್ಕಾಂಗಳಾದ ಬೆಸ್ಕಾಂ ಮೆಸ್ಕಾಂ, ಸೆಸ್ಕಾಂ, ಹೆಸ್ಕಾಂ ಹಾಗೂ ಜೆಸ್ಕಾಂ ವ್ಯಾಪ್ತಿಯಲ್ಲಿ ಇದುವರೆಗೆ ಒಟ್ಟು ಎಷ್ಟು ಅರ್ಜಿಗಳು ಸ್ವೀಕರಿಸಲಾಗಿದೆ, ಎಷ್ಟು ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ ಹಾಗೂ ಎಷ್ಟು ಮೇಲಾವಣಿ ಸೌರ ವಿದ್ಯುತ್ ವ್ಯವಸ್ಥೆಗಳನ್ನು ಯಶಸ್ವಿಯಾಗಿ ಸ್ಥಾಪಿಸಿ/ಕಾರ್ಯಾರಂಭಗೊಳಿಸಲಾಗಿದೆ; ಪ್ರತಿ ಎಸ್ಕಾಂವಾರು, ಜಿಲ್ಲಾವಾರು ವಿವರ ಹಾಗೂ ಒಟ್ಟು ಸ್ಥಾಪಿತ ಸಾಮರ್ಥ್ಯವನ್ನು ಮೆಗಾವ್ಯಾಟ್‌ನಲ್ಲಿ ನೀಡುವುದು; | ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯ ಪ್ರಾರಂಭವಾದಾಗಿನಿಂದ ಸ್ವೀಕರಿಸಲಾದ, ಅನುಮೋದಿಸಲಾದ ಹಾಗೂ ಕಾರ್ಯಾರಂಭಗೊಳಿಸಲಾಗಿರುವ ಅರ್ಜಿಗಳು ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ಅರ್ಜಿಗೆ ಅನುಮೋದನೆ ದೊರೆತ ನಂತರ ಸೌರ ವಿದ್ಯುತ್ ವ್ಯವಸ್ಥೆಯನ್ನು ವಾಸ್ತವವಾಗಿ ಸ್ಥಾಪಿಸಿ ಕಾರ್ಯಾರಂಭಗೊಳಿಸುವವರೆಗೆ ಉಂಟಾಗುತ್ತಿರುವ ವಿಳಂಬಕ್ಕೆ ನಿಖರ ಕಾರಣಗಳೇನು; | ಯೋಜನೆಯಡಿ ಅರ್ಜಿಗೆ ಅನುಮೋದನೆ ದೊರೆತ ನಂತರ ಸೌರ ವಿದ್ಯುತ್ ವ್ಯವಸ್ಥೆಯನ್ನು ವಾಸ್ತವವಾಗಿ ಸ್ಥಾಪಿಸಿ ಕಾರ್ಯಾರಂಭಗೊಳಿಸುವುದಕ್ಕೆ ಉಂಟಾಗುತ್ತಿರುವ ವಿಳಂಬಕ್ಕೆ ಕಾರಣಗಳು:<br>1. ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಅರ್ಜಿಗಳಿಗೆ ಅನುಮೋದನೆ ದೊರೆತ ನಂತರ ಅರ್ಜಿದಾರರು ವೆಂಡರ್ ಆಯ್ಕೆಮಾಡುವಲ್ಲಿ ವಿಳಂಬವಾಗುತ್ತಿರುತ್ತದೆ.<br>2. ಅರ್ಜಿ ಅನುಮೋದನೆಗೊಂಡ ನಂತರ ಸೌರ ಘಟಕ ಸ್ಥಾಪಿಸಲು ಬ್ಯಾಂಕ್ ಸಾಲ ಪಡೆಯುವಲ್ಲಿ ಆಗುವ ವಿಳಂಬಗಳ ಕಾರಣದಿಂದ ಸ್ಥಾಪನೆ ಪ್ರಕ್ರಿಯೆಯನ್ನು ಮುಂದುವರಿಸುತ್ತಿಲ್ಲ. ಹಾಗೂ ಬ್ಯಾಂಕ್ ಸಾಲದ ಮೂಲಕ ಯೋಜನೆಯನ್ನು ಕೈಗೊಳ್ಳಲು ಬಯಸುವ ಗ್ರಾಹಕರು ಈ ಕೆಳಗಿನ ಸವಾಲುಗಳನ್ನು ಎದುರಿಸುತ್ತಿದ್ದಾರೆ:<br>a. ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಪ್ರಕ್ರಿಯೆಯಲ್ಲಿ ವಿಳಂಬ.<br>b. ಸಾಲ ಮಂಜೂರಾತಿಗೆ ಹೆಚ್ಚಿನ ದಾಖಲೆಗಳ (Documentation) ಸಲ್ಲಿಕೆ ಅಗತ್ಯತೆ.<br>ಸಾಲ ಅನುಮೋದನೆಗೆ ಹೆಚ್ಚು ಸಮಯ ತೆಗೆದುಕೊಳ್ಳುವುದು ಮತ್ತು ಸಾಲದ ಮೊತ್ತ ಬಿಡುಗಡೆ (Disbursement) ಯಲ್ಲಿನ ವಿಳಂಬ. |

| | | |
|---|---|---|
| ಇ) | ಗೃಹ ಜ್ಯೋತಿ ಯೋಜನೆಯಡಿ ನಿಗದಿತ ಮಿತಿಯೊಳಗೆ ಗೃಹ ಬಳಕೆದಾರರಿಗೆ ಉಚಿತ/ಸಬ್ಸಿಡಿ ವಿದ್ಯುತ್ ಲಭ್ಯವಾಗುತ್ತಿರುವ ಹಿನ್ನಲೆಯಲ್ಲಿ, ಕಡಿಮೆ ವಿದ್ಯುತ್ ಬಳಕೆ ಮಾಡುವ ಗೃಹಬಳಕೆದಾರರಲ್ಲಿ ಮೇಲ್ಛಾವಣಿ ಸೌರ ವಿದ್ಯುತ್ ವ್ಯವಸ್ಥೆ ಅಳವಡಿಸಿಕೊಳ್ಳುವ ತಕ್ಷಣದ ಆರ್ಥಿಕ ಆಸಕ್ತಿ ಮತ್ತು ಬೇಡಿಕೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಗ್ರಾಹಕರಲ್ಲಿ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು ಎಸ್ಕಾಂ ನಿರಂತರವಾಗಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರ ಜೊತೆಗೆ, ಗ್ರಾಹಕರಿಗೆ ಯೋಜನೆಯ ಲಾಭಗಳ ಕುರಿತು ಅರಿವು ಮೂಡಿಸುವ ಸಲುವಾಗಿ ವಿವಿಧ ಜಾಗೃತಿ ಕಾರ್ಯಕ್ರಮಗಳು, ಪ್ರಚಾರ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ. ಎಲ್ಲಾ ಎಸ್ಕಾಂ ವತಿಯಿಂದ ಯೋಜನೆಯ ಪ್ರಯೋಜನಗಳು, ಸಹಾಯಧನ ಹಾಗೂ ದೀರ್ಘಾವಧಿಯ ಉಳಿತಾಯದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ) | ಗೃಹ ಜ್ಯೋತಿ ಯೋಜನೆಯು ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ ಮೇಲ್ಛಾವಣಿ ಸೌರ ವಿದ್ಯುತ್ ಅಳವಡಿಕೆಯ ಮೇಲೆ ಬೀರಿರುವ ಪರಿಣಾಮದ ಕುರಿತು ಸರ್ಕಾರ ಯಾವುದೇ ಅಧ್ಯಯನ ಅಥವಾ ಮೌಲ್ಯಮಾಪನ ನಡೆಸಿದೆಯೇ; (ಮಾಹಿತಿ ನೀಡುವುದು); | ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಯಾವುದೇ ಅಧ್ಯಯನ ಅಥವಾ ಮೌಲ್ಯಮಾಪನ ಕೈಗೊಂಡಿರುವುದಿಲ್ಲ. |
| ಉ) | ಗೃಹ ಜ್ಯೋತಿ ಯೋಜನೆಯ ಪ್ರಯೋಜನಗಳಿದ್ದರೂ ಸಹ, ಅರ್ಹ ಕುಟುಂಬಗಳು ಮೇಲಾವಣಿ ಸೌರ ವಿದ್ಯುತ್ ವ್ಯವಸ್ಥೆ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಪೂರ್ವಭಾವಿ ಕ್ರಮಗಳೇನು; | ಸೌರ ವಿದ್ಯುತ್ ವ್ಯವಸ್ಥೆ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಿಸಲು ಸರ್ಕಾರದಿಂದ ಕೈಗೊಳ್ಳಲಾಗಿರುವ ಪ್ರೋತ್ಸಾಹಕ ಕ್ರಮಗಳು:<br>1. **ತಾಂತ್ರಿಕ ಅನುಮೋದನೆಯಿಂದ (Technical Feasibility Approval) ವಿನಾಯಿತಿ**: 150 ಕಿ.ವ್ಯಾ ವರೆಗಿನ ಸಾಮರ್ಥ್ಯದ ಮೇಲ್ಛಾವಣಿ ಸೌರ ವ್ಯವಸ್ಥೆಗಳನ್ನು ಅಳವಡಿಸುವ ವಸತಿ ಗ್ರಾಹಕರಿಗೆ ತಾಂತ್ರಿಕ ಸಾಧ್ಯತಾ ಅನುಮೋದನೆ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ. ಗ್ರಾಹಕರು ಅರ್ಜಿ ಸಲ್ಲಿಸಿ ಸಮ್ಮತಿ ಸೂಚಿಸಿದ ತಕ್ಷಣ, ಅರ್ಜಿಯನ್ನು ಅನುಮೋದಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ನೇರವಾಗಿ ಸೌರ ವಿದ್ಯುತ್ ಘಟಕದ ಅಳವಡಿಕೆಗೆ ಮುಂದುವರಿಯಬಹುದಾಗಿದೆ.<br>2. **ಎಂಡ್-ಟು-ಎಂಡ್ ಆನ್‌ಲೈನ್ ಅರ್ಜಿ ವ್ಯವಸ್ಥೆ:** ನೋಂದಣಿ, ಅನುಮೋದನೆಗಳು, ಪರಿಶೀಲನೆ (Inspection) ಮತ್ತು ಕಾರ್ಯಾರಂಭ (Commissioning) ಪ್ರಕ್ರಿಯೆಗಳನ್ನು ಒಳಗೊಂಡ ಸಂಪೂರ್ಣ ಆನ್‌ಲೈನ್ ಅರ್ಜಿ ಸಂಸ್ಕರಣಾ ವ್ಯವಸ್ಥೆಯನ್ನು ಬೆಸ್ಕಾಂ ಅಭಿವೃದ್ಧಿಪಡಿಸಿದೆ.<br>3. **ನೋಂದಣಿ ಮತ್ತು ಸೌಲಭ್ಯ ಒದಗಿಸುವ ಶುಲ್ಕಗಳ ಮನ್ನಾ:** ಪಿಎಂ ಸೂರ್ಯ ಘರ್ ಯೋಜನೆಯ ಅರ್ಜಿಗಳಿಗೆ ನೋಂದಣಿ ಮತ್ತು ಸೌಲಭ್ಯ ಒದಗಿಸುವ ಶುಲ್ಕಗಳನ್ನು (Registration and facilitation charges) ಮನ್ನಾ ಮಾಡಲಾಗಿದೆ.<br>4. **ವಿದ್ಯುತ್ ಖರೀದಿ ಒಪ್ಪಂದದಿಂದ (PPA) ವಿನಾಯಿತಿ:** 150 ಕಿ.ವ್ಯಾ ವರೆಗಿನ ಸಾಮರ್ಥ್ಯದ ಮೇಲ್ಛಾವಣಿ ಸೌರ ವ್ಯವಸ್ಥೆಗಳನ್ನು ಅಳವಡಿಸುವ ವಸತಿ ಗ್ರಾಹಕರಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುವುದರಿಂದ ವಿನಾಯಿತಿ ನೀಡಲಾಗಿದೆ. |

| | | |
|---|---|---|
| | | **ಪಿಎಂ ಸೂರ್ಯ ಘರ್ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು ಕೈಗೊಳ್ಳಲಾಗಿರುವ ವಿವಿಧ ಜಾಗೃತಿ ಕಾರ್ಯಕ್ರಮಗಳು:** ರಾಜ್ಯದಾದ್ಯಂತ ಕೈಗೊಂಡಿರುವ ನಗರ, ಪಟ್ಟಣ ಮತ್ತು ಗ್ರಾಮೀಣ ಭಾಗದ ಗ್ರಾಹಕರನ್ನು ತಲುಪಲು ವಿವಿಧ ಮಾಧ್ಯಮ ಹಾಗೂ ಸಂವಹನ ವೇದಿಕೆಗಳ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇದರಲ್ಲಿ ಟೆಲಿವಿಷನ್, ರೇಡಿಯೋ, ದಿನಪತ್ರಿಕೆಗಳು, ಹೊರಾಂಗಣ ಪ್ರಚಾರ (Outdoor Publicity), ಸಾಮಾಜಿಕ ಜಾಲತಾಣ ಅಭಿಯಾನಗಳು, ಡಿಜಿಟಲ್ ವೇದಿಕೆಗಳು, ಸ್ಥಾಪನೆಗಳು ಮತ್ತು ಎಲ್ಇಡಿ ಮೊಬೈಲ್ ವ್ಯಾನ್ ಅಭಿಯಾನಗಳು ಸೇರಿವೆ. |
| ಊ) | ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ ಕರ್ನಾಟಕದಲ್ಲಿ ಗ್ರೂಪ್ ಹೌಸಿಂಗ್ ಸೊಸೈಟಿಗಳು (GHS), ರೆಸಿಡೆನ್ಸಿಯಲ್ ವೆಲ್ಫೇರ್ ಅಸೋಸಿಯೇಷನ್ಗಳು (RWA), ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳು ಹಾಗೂ ಇತರ ಅಪಾರ್ಟ್‌ಮೆಂಟ್ ಸಂಕೀರ್ಣಗಳಲ್ಲಿ ಮೇಲ್ಛಾವಣಿ ಸೌರ ವಿದ್ಯುತ್ ವ್ಯವಸ್ಥೆ ಕ್ರಮಗಳನ್ನು ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಇವುಗಳನ್ನು ಅಳವಡಿಸಲು ಸರ್ಕಾರ ರೂಪಿಸಿರುವ ನಿರ್ದಿಷ್ಟ ನೀತಿ, ಅನುಷ್ಠಾನ ಚೌಕಟ್ಟು ಮತ್ತು ಗುರಿಗಳೇನು? | ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆಯಡಿ ಗ್ರೂಪ್ ಹೌಸಿಂಗ್ ಸೊಸೈಟಿಗಳು (GHS), ರೆಸಿಡೆನ್ಷಿಯಲ್ ವೆಲ್ಫೇರ್ ಅಸೋಸಿಯೇಷನ್‌ಗಳು (RWA), ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳು ಹಾಗೂ ಇತರ ಅಪಾರ್ಟ್‌ಮೆಂಟ್ ಸಂಕೀರ್ಣಗಳಲ್ಲಿ ಸಾಮೂಹಿಕ ಸೌಲಭ್ಯಗಳಿಗಾಗಿ ಮೇಲ್ಛಾವಣಿ ಸೌರ ವಿದ್ಯುತ್ ವ್ಯವಸ್ಥೆಗಳನ್ನು ಅಳವಡಿಸಲು ದಿನಾಂಕ:07.06.2024 ರ MNRE ಮಾರ್ಗಸೂಚಿಗಳ ಅನ್ವಯ ಅವಕಾಶ ಕಲ್ಪಿಸಲಾಗಿದೆ.<br>MNRE ಮಾರ್ಗಸೂಚಿಗಳ ಪ್ರಕಾರ, GHS ಮತ್ತು RWA ಗಳಿಗೆ ಸಾಮೂಹಿಕ ಬಳಕೆಯ ಸೌಲಭ್ಯಗಳಿಗಾಗಿ ಗರಿಷ್ಠ 500 kWp ಸಾಮರ್ಥ್ಯದವರೆಗೆ ಮೇಲ್ಛಾವಣಿ ಸೌರ ವಿದ್ಯುತ್ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಅವಕಾಶವಿದ್ದು, ಪ್ರತಿ ಕಿಲೋವ್ಯಾಟ್‌ಗೆ ₹18,000/-ಕೇಂದ್ರ ಹಣಕಾಸು ಸಹಾಯಧನ (CFA) ಲಭ್ಯವಿರುತ್ತದೆ.<br>ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಪಾರ್ಟ್‌ಮೆಂಟ್ ಸಂಘಗಳು, ನಿವಾಸಿಗಳ ಕಲ್ಯಾಣ ಸಂಘಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br>ರಾಜ್ಯಾದ್ಯಂತ ಈವರೆಗೆ 218 RWA ಗಳಲ್ಲಿ 7MW ಸಾಮರ್ಥ್ಯದ ಸೌರ ಮೇಲ್ಛಾವಣಿ ಘಟಕಗಳನ್ನು ಈಗಾಗಲೇ ಅಳವಡಿಸಲಾಗಿದೆ. |

ಸಂಖ್ಯೆ: ಎನರ್ಜಿ 206 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಮತ್ತು ಪ್ರವಾಸೋದ್ಯಮ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರದೀಪ್ ಶೆಟ್ಟರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 480 ಕ್ಕೆಅನುಬಂಧ**

ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯ ಪ್ರಾರಂಭವಾದಾಗಿನಿಂದ ಸ್ವೀಕರಿಸಲಾದ, ಅನುಮೋದಿಸಲಾದ ಹಾಗೂ ಕಾರ್ಯಾರಂಭಗೊಳಿಸಲಾಗಿರುವ ಅರ್ಜಿಗಳು ಎಸ್ಕಾಂವಾರು, ಜಿಲ್ಲಾವಾರು ವಿವರಗಳು:

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:**

| ಕ್ರ. ಸಂ | ಜಿಲ್ಲೆಯ ಹೆಸರು | ಸ್ವೀಕೃತಗೊಂಡ ಸಂಖ್ಯೆ | ಅನುಮೋದನೆಗೊಂಡಿರುವ ಅರ್ಜಿಗಳ ಸಂಖ್ಯೆ | ಕಾರ್ಯಾರಂಭಗೊಂಡಿರುವ ಅರ್ಜಿಗಳ ಸಂಖ್ಯೆ | |
|---|---|---|---|---|---|
| | | | | ಸಂಖ್ಯೆಗಳು | ಸಾಮರ್ಥ್ಯ (ಮೆಗಾವ್ಯಾಟ್ ನಲ್ಲಿ) |
| 1 | ಬೆಂಗಳೂರು ಗ್ರಾಮಾಂತರ | 3189 | 2565 | 562 | 2.17 |
| 2 | ಬೆಂಗಳೂರು ನಗರ | 17805 | 17666 | 8361 | 38.82 |
| 3 | ಚಿಕ್ಕಬಳ್ಳಾಪುರ | 3235 | 2783 | 66 | 0.27 |
| 4 | ಚಿತ್ರದುರ್ಗ | 1716 | 1554 | 181 | 0.61 |
| 5 | ದಾವಣಗೆರೆ | 2384 | 2320 | 341 | 1.2 |
| 6 | ಕೋಲಾರ | 2071 | 1253 | 109 | 0.39 |
| 7 | ರಾಮನಗರ | 586 | 529 | 59 | 0.22 |
| 8 | ತುಮಕೂರು | 1833 | 1548 | 355 | 1.31 |
| | **ಒಟ್ಟು ಸಂಖ್ಯೆ** | **32819** | **30218** | **10034** | **44.99** |

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ :**

| ಜಿಲ್ಲೆ | ಸ್ವೀಕರಿಸಲಾದ ಅರ್ಜಿಗಳು | ಅನುಮೋದನೆ ನೀಡಲಾದ ಅರ್ಜಿಗಳು | ಮೇಲ್ಛಾವಣಿ ಸೌರ ವಿದ್ಯುತ್ ವ್ಯವಸ್ಥೆ ಸ್ಥಾಪಿಸಲಾದ ಅರ್ಜಿಗಳು | ಸ್ಥಾಪಿತ ಸಾಮರ್ಥ್ಯ ಮೆ.ವ್ಯಾ. |
|---|---|---|---|---|
| ಮೈಸೂರು | 2891 | 2745 | 1904 | 7.30 |
| ಚಾಮರಾಜ ನಗರ | 157 | 141 | 80 | 0.28 |
| ಕೊಡಗು | 305 | 303 | 220 | 0.819 |
| ಮಂಡ್ಯ | 890 | 778 | 223 | 0.745 |
| ಹಾಸನ | 627 | 528 | 265 | 0.979 |
| **ಒಟ್ಟು** | **4870** | **4495** | **2692** | **10.123** |

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ :**

| ಜಿಲ್ಲೆ | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ಅನುಮೋದನೆಗೊಂಡ ಅರ್ಜಿಗಳ ಸಂಖ್ಯೆ | ಅನುಷ್ಠಾನಗೊಂಡ ಅರ್ಜಿಗಳ ಸಂಖ್ಯೆ | ಸಾಮರ್ಥ್ಯ (ಮೆ.ವ್ಯಾ.) |
|---|---|---|---|---|
| ದಕ್ಷಿಣ ಕನ್ನಡ | 3549 | 2814 | 2781 | 10.847 |
| ಉಡುಪಿ | 2255 | 1768 | 1747 | 6.667 |
| ಶಿವಮೊಗ್ಗ | 1216 | 754 | 738 | 3.043 |
| ಚಿಕ್ಕಮಗಳೂರು | 967 | 201 | 191 | 0.727 |
| **ಒಟ್ಟು** | **7987** | **5537** | **5457** | **21.284** |

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:

| ಜಿಲ್ಲೆಯ ಹೆಸರು | ಅರ್ಜಿಗಳ ಸಂಖ್ಯೆ | ಅನುಮೋದನೆಗೊಂಡಿರುವ ಅರ್ಜಿಗಳ ಸಂಖ್ಯೆ | ಕಾರ್ಯಾರಂಭಗೊಂಡಿರುವ ಅರ್ಜಿಗಳ ಸಂಖ್ಯೆ | |
|---|---|---|---|---|
| | | | ಸಂಖ್ಯೆಗಳು | ಸಾಮರ್ಥ್ಯ (ಮೆ.ವ್ಯಾ.) |
| ಬಾಗಲಕೋಟೆ | 954 | 953 | 500 | 1.80 |
| ಬೆಳಗಾವಿ | 2142 | 2135 | 1073 | 3.65 |
| ಗದಗ | 304 | 301 | 154 | 0.54 |
| ಹಾವೇರಿ | 485 | 482 | 151 | 0.52 |
| ಧಾರವಾಡ | 1068 | 1065 | 767 | 2.98 |
| ಉತ್ತರ ಕನ್ನಡ | 1097 | 1094 | 656 | 2.12 |
| ವಿಜಯಪುರ | 836 | 834 | 280 | 1.09 |
| **ಒಟ್ಟು** | **6886** | **6864** | **3581** | **12.70** |

## ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ :

| ಜಿಲ್ಲೆ | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಅನುಮೋದನೆಗೊಂಡ ಅರ್ಜಿಗಳ ಸಂಖ್ಯೆ | ನಿಯೋಜಿತವಾದ ಅರ್ಜಿಗಳ ಸಂಖ್ಯೆ | ನಿಯೋಜಿತವಾದ ಸಾಮರ್ಥ್ಯ (ಮೆಗಾವ್ಯಾಟ್ ನಲ್ಲಿ) |
|---|---|---|---|---|
| ಬೀದರ | 399 | 248 | 108 | 0.40 |
| ಕಲಬುರಗಿ | 685 | 496 | 279 | 1.12 |
| ರಾಯಚೂರ | 623 | 473 | 247 | 0.94 |
| ಕೊಪ್ಪಳ | 504 | 316 | 145 | 0.56 |
| ಬಳ್ಳಾರಿ | 784 | 427 | 269 | 1.05 |
| ಯಾದಗಿರ | 156 | 97 | 25 | 0.10 |
| ವಿಜಯನಗರ | 377 | 283 | 180 | 0.68 |
| **ಒಟ್ಟು** | **3528** | **2340** | **1253** | **4.85** |